ಸದಸ್ಯರ ಅನರ್ಹತೆ) ನಿಯಮಾವಳಿಗಳು 1986 ರ ಅನ್ವಯ ಶ್ರೀ ಸಿ.ಪಿ. ಯೋಗೇಶ್ವರ್ ರವರು ದಿನಾಂಕ: 14.05.2014 ರಿಂದ ಜಾರಿಗೆ ಬರುವಂತೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸದಸ್ಯರಾಗಿರುತ್ತಾರೆಂದು ಪರಿಗಣಿಸಿ ಈ ಮೂಲಕ ಆದೇಶಿಸಿದ್ದೇನೆ.

ಇದನ್ನು ಸದನದ ಗಮನಕ್ಕೆ ತರಬಯಸುತ್ತೇನೆ.

2. ಹದಿನಾಲ್ಕನೇ ವಿಧಾನಸಭೆಗೆ ಬಳ್ಳಾರಿ (ಪ.ಪಂ.) ಕ್ಷೇತ್ರದಿಂದ ಚುನಾಯಿತರಾಗಿದ್ದ ಶ್ರೀ ಬಿ. ಶ್ರೀರಾಮುಲು ಅವರು ವಿಧಾನಸಭಾ ಸದಸ್ಯತ್ವಕ್ಕೆ ನೀಡಿರುವ ರಾಜೀನಾಮೆಯನ್ನು ದಿನಾಂಕ: 19ನೇ ಮಾರ್ಚ್ 2014 ರಂದು, ಶಿಕಾರಿಪುರ ಕ್ಷೇತ್ರದಿಂದ ಚುನಾಯಿತರಾಗಿದ್ದ ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ಚಿಕ್ಕೋಡಿ–ಸದಲಗ ಕ್ಷೇತ್ರದಿಂದ ಚುನಾಯಿತರಾಗಿದ್ದ ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ಅವರುಗಳು ವಿಧಾನಸಭಾ ಸದಸ್ಯತ್ವಕ್ಕೆ ನೀಡಿರುವ ರಾಜೀನಾಮೆಗಳನ್ನು ದಿನಾಂಕ 30ನೇ ಮೇ 2014 ರಂದು ಅಂಗೀಕರಿಸಲಾಗಿದೆಯೆಂದು ಈ ಮೂಲಕ ಸದನದ ಗಮನಕ್ಕೆ ತರಲಾಗಿದೆ.

5. ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿ (ಕರ್ನಾಟಕ ವಿಧಾನಸಭೆ) : ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಷ್ಟ್ರಪತಿ/ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಹದಿನಾಲ್ಕನೇ ವಿಧಾನಸಭೆಗೆ ಸಂಬಂಧಪಟ್ಟಂತೆ ರಾಷ್ಟ್ರಪತಿಯವರಿಂದ/ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿ

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1.	ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ (ತಿದ್ದುಪಡಿ) ವಿಧೇಯಕ, 2013	23.12.2013	ರಾಜ್ಯಪಾಲರು
2.	ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ)(ತಿದ್ದುಪಡಿ) ವಿಧೇಯಕ, 2013	03.01.2014	ರಾಜ್ಯಪಾಲರು
3.	ಕರ್ನಾಟಕ ಸಿವಿಲ್ ಸೇವೆಗಳು (ಜಲಸಂಪನ್ಮೂಲ ಸೇವೆ) (ಸಹಾಯಕ ಇಂಜಿನಿಯರುಗಳ ಮತ್ತು ಕಿರಿಯ ಇಂಜಿನಿಯರುಗಳ ವಿಶೇಷ ನೇಮಕಾತಿ) ವಿಧೇಯಕ, 2013	13.12.2013	ರಾಜ್ಯಪಾಲರು
4.	ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ) ವಿಧೇಯಕ, 2014	11.02.2014	ರಾಜ್ಯಪಾಲರು
5.	ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2014	20.02.2014	ರಾಜ್ಯಪಾಲರು
6.	ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2014	28.02.2014	ರಾಜ್ಯಪಾಲರು
7.	ಕರ್ನಾಟಕ ಧನವಿನಿಯೋಗ ವಿಧೇಯಕ, 2014	28.02.2014	ರಾಜ್ಯಪಾಲರು
8.	ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2014	28.02.2014	ರಾಜ್ಯಪಾಲರು
9.	ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ, 2014	28.02.2014	ರಾಜ್ಯಪಾಲರು
10.	ಕರ್ನಾಟಕ ಆರ್ಥಿಕ ಹೊಣೆಗಾರಿಕೆ (ತಿದ್ದುಪಡಿ) ವಿಧೇಯಕ, 2014	28.02.2014	ರಾಜ್ಯಪಾಲರು
11.	ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) (ತಿದ್ದುಪಡಿ) ವಿಧೇಯಕ, 2014	28.02.2014	ರಾಜ್ಯಪಾಲರು
12.	ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ, 2014	28.02.2014	ರಾಜ್ಯಪಾಲರು
13.	ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ನಿರಸನ ವಿಧೇಯಕ, 2014	20.02.2014	ರಾಜ್ಯಪಾಲರು

14.	ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2014	20.02.2014	ರಾಜ್ಯಪಾಲರು
15.	ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2013	03.01.2014	ರಾಜ್ಯಪಾಲರು
16.	ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ, 2014	20.02.2014	ರಾಜ್ಯಪಾಲರು
17.	ಕೈಗಾರಿಕಾ ನಿಯೋಜನೆ ಸ್ಥಾಯಿ (ಆದೇಶಗಳು) (ಕರ್ನಾಟಕ ತಿದ್ದುಪಡಿ) ವಿಧೇಯಕ, 2005	17.02.2014	ರಾಷ್ಟ್ರಪತಿ
18.	ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2013	23.12.2013	ರಾಜ್ಯಪಾಲರು
19.	ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2014	28.02.2014	ರಾಜ್ಯಪಾಲರು
20.	ಕರ್ನಾಟಕ ಮೌಲವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2014	28.02.2014	ರಾಜ್ಯಪಾಲರು

ಅಧ್ಯಕ್ಷರು : ಮಂಡಿಸಲಾಯಿತು, ಮಾನ್ಯ ಜಗದೀಶ್ ಶೆಟ್ಟರ್‌ರವರೆ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ನಾನು ಬೆಳಿಗ್ಗೆ ನಿಲುವಳಿ ಸೂಚನೆಯನ್ನು ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಚರ್ಚಿಸಲು ತಮಗೆ ಸಲ್ಲಿಸಿದ್ದೆ. ತಾವು ಅದನ್ನು ರೂಲ್ 69ಕ್ಕೆ ಕನ್‌ವರ್ಟ್ ಮಾಡಿದ್ದೀರಿ.

ಶ್ರೀ ವೈ.ಎಸ್. ವಿ. ದತ್ತಾ: ಮಾನ್ಯ ಅಧ್ಯಕ್ಷರೆ, ನಾವು ಕೊಟ್ಟಿರುವ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಮೊದಲು ಕಬ್ಬು ಬೆಳೆಗಾರರ ಸಮಸ್ಯೆ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ನಾಳೆ ಕೂಡ ಮಾತನಾಡಲು ಬೇಕಾದಷ್ಟು ಅವಕಾಶಗಳಿರುವುದರಿಂದ ಈಗ ಮೊದಲು ಕಬ್ಬು ಬೆಳೆಗಾರರ ವಿಚಾರವನ್ನು ತೆಗೆದುಕೊಳ್ಳಬೇಕು.

ಶ್ರೀ ವೈ.ಎಸ್. ವಿ. ದತ್ತಾ : ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದು ಇತ್ತು.

ಅಧ್ಯಕ್ಷರು: ನಾಳೆ ತೆಗೆದುಕೊಳ್ಳೋಣ. ಇವತ್ತು ಸಮಯಾವಕಾಶ ಸಾಕಾಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಬೇಕಾದ ನಮ್ಮದೊಂದು ವಿಚಾರವಿದೆ. ಅದನ್ನೂ ಕೂಡ ನಾಳೆ ಹಾಕಿಕೊಳ್ಳಬೇಕು.